**ಗೆಳೆಯ:** ಏನೋ ನಿನ್ನ ಹೆಂಡತಿ ಹೆಚ್ಚಾಗಿ ಅಡುಗೆ ಮನೆಯಲ್ಲೇ ಇರ್ತಾಳೆ?
**ಗುಂಡ:** ಹೌದಯ್ಯ.
**ಗೆಳೆಯ:** ಹಾಗಾದ್ರೆ ಅಡುಗೆ ಮತ್ತು ಅಡುಗೆಮನೆ ಬಗ್ಗೆ ತುಂಬಾ ಆಸಕ್ತಿ ಇದೆ ಅಂತಾಯ್ತು ಅನ್ನು.
**ಗುಂಡ:** ಹಾಗೇನಿಲ್ಲ ಕಣಯ್ಯ! ಅವಳ ಮೊಬೈಲ್ ಸದಾಕಾಲ ಅಡುಗೆ ಮನೆಯಲ್ಲೇ ಇರುತ್ತದೆ. ಅದಕ್ಕೆ.

***




**ಭಿಕ್ಷುಕ:** ಅಮ್ಮಾವ್ರೆ ನಿಮ್ಮೆಜಮಾನರು ನಿಮಗೆ ತಂದುಕೊಟ್ಟಿರುವ ಸೀರೆಯಲ್ಲಿ ಜರಿ ಸ್ವಲ್ಪ ಕಡಿಮೆ ಇದೆಯಲ್ಲವೇ?
**ಗೃಹಿಣಿ:** ಹೌದು, ಆ ಬಗ್ಗೆ ನಿನಗೆ ಹೇಗೆ ಗೊತ್ತಾಯ್ತು?
**ಭಿಕ್ಷುಕ:** ಅಯ್ಯೋ ಅಮ್ಮಾವ್ರೆ ಆ ಸೀರೆಯನ್ನು ನಾನು ನಿನ್ನೆ ನನ್ನ ಹೆಂಡತಿಗೆ ತಗೋಳ್ಳೋಣಾಂತ ನೋಡಿದೆ. ಆಮೇಲೆ ಬೇಡಾಂತ ಬಿಟ್ಟೆದ್ದೆ. ಆಗ ಅಲ್ಲಿಗೆ ಬಂದ ನಿಮ್ಮೆಜಮಾನರು ಅದನ್ನೇ ತೆಗೆದುಕೊಂಡು ಬಂದಿದ್ದಾರೆ.

***

**ನ್ಯಾಯಾಧೀಶ:** ನಿನ್ನ ವಯಸ್ಸು?
**ಸಾಕ್ಷಿ:** 25 ವರ್ಷ.
**ನ್ಯಾಯಾಧೀಶ:** ಅದನ್ನು ರುಜುವಾತುಪಡಿಸಲು ನೀನು ಬಹಳ ಕಷ್ಟಪಡಬೇಕಾಗುತ್ತದೆ. ಏನು ಹೇಳುತ್ತೀಯಾ?
**ಸಾಕ್ಷಿ:** ಅದನ್ನು ನೀವು ತಿಳಿಯೋಕೆ ನನಗಿಂತ ಇನ್ನೂ ಕಷ್ಟ ಪಡಬೇಕಾಗುತ್ತದೆ. ಯಾಕೆಂದರೆ ನಾನು ಹುಟ್ಟಿದ ದಾಖಲೆ ಇದ್ದ ಮುನಿಸಿಪಲ್ ಆಫೀಸು ಸುಮಾರು 20 ವರ್ಷದ ಹಿಂದೆಯೇ ಸುಟ್ಟು ಹೋಗಿದೆ.

***

**ಟೀಚರ್:** ಗುಂಡ ನಿನ್ನೆ ಯಾಕೆ ಶಾಲೆಗೆ ಬರಲಿಲ್ಲ?
**ಗುಂಡ:** ಏನಿಲ್ಲ ಟೀಚರ್. ಮೊನ್ನೆ ನಾನು ನಿಮ್ಮನ್ನು ಡಾಕ್ಟರ್ ಶಾಪಿನಲ್ಲಿ ನೋಡ್ದೆ. ಅದಕ್ಕೆ

**ಟೀಚರ್:** ಕನ್ನಡದಲ್ಲಿ ನೀನು ತುಂಬಾ ವೀಕ್ ಇದ್ದದ್ದಕ್ಕೆ, 10 ಸಲ ಅಕ್ಷರ ಮಾಲೆ ಬರೆದುಕೊಂಡು ಬಾ ಅಂತ ನಿನ್ನೆ ಹೇಳಿದ್ದೆ. ಆದರೆ ನೀನು 3 ಸಲ ಮಾತ್ರ ಬರೆದುಕೊಂಡು ಬಂದಿದ್ದೀಯಲ್ಲ ಯಾಕೆ?
**ಗುಂಡ:** ನಾನು ಗಣಿತದಲ್ಲೂ ತುಂಬಾ ವೀಕ್ ಇದೀನಿ ಮೇಡಂ.

ನಿನ್ನೆ ನೀವು ಶಾಲೆಗೆ ಬರ್ತೀರೊ ಇಲ್ವೊ ಅನ್ನೋ ಅನುಮಾನದಿಂದ ನಾನೂ ಬರಲಿಲ್ಲ

***

**ಗುಂಡ:** ನಾನು ನಿನಗೆ ಸ್ಕೂಟರ್, ಕಾರು, ಮನೆ ಎಲ್ಲಾ ಕೊಡಿಸ್ತೀನಿ ಅಂತ ಹೇಳಿದರೂ ನೀನು ನನ್ನನ್ನು ಯಾಕೆ ಮದುವೆಯಾಗೋಕೆ ಒಪ್ತಾ ಇಲ್ಲ?
**ಪ್ರೇಯಸಿ:** ನಮ್ ಮಾವನ ಮಗ ನೀನು ಕೊಡಿಸುವುದೆಲ್ಲದರ ಜೊತೆಗೆ ಪ್ರತಿ ತಿಂಗಳು ಒಂದು ಲಕ್ಷ ರೂಪಾಯಿ ಕೊಡ್ತೀನಿ ಅಂತ ಹೇಳಿದ್ದಾನೆ.

***

**ನ್ಯಾಯಾಧೀಶ:** ನಿಮ್ಮ ಪಕ್ಕದ ಮನೆಯವನು ನಿಮಗೆ ಬಲವಂತವಾಗಿ ಮುತ್ತು ಕೊಟ್ಟನೆಂದು ಆರೋಪಿಸಿದ್ದೀರಿ. ಹೌದಾ?
**ರಾಣಿ:** ಹೌದು.
**ನ್ಯಾಯಾಧೀಶ:** ಆದರೆ ಅವನು ನಿಮಗಿಂತ ತುಂಬಾ ಕುಳ್ಳ. ಅದು ಹೇಗೆ ಅವನು ನಿಮಗೆ ಮುತ್ತು ಕೊಡಲು ಸಾಧ್ಯ?
**ರಾಣಿ:** ನಾನೇ ಕೆಳಗೆ ಬಾಗಿದೆ.

***

**ನ್ಯಾಯಾಧೀಶ:** ಏನಯ್ಯಾ ಒಂದೇ ಮನೆಯಲ್ಲಿ ಈ ತಿಂಗಳು ಐದು ಬಾರಿ ಕಳ್ಳತನ ಮಾಡಿದ್ದೀಯಲ್ಲ, ಯಾಕೆ?
**ಕಳ್ಳ:** ಏನು ಮಾಡಲಿ ಸ್ವಾಮಿ. ಈ ಊರಿನಲ್ಲಿ ಇದ್ದದ್ದು ಅದೊಂದೇ ಶ್ರೀಮಂತರ ಮನೆ.

***

**ನಿರ್ದೇಶಕ:** ನವ ನಟನಾದರೂ ನಿನ್ನ ಅಭಿನಯ ಅದ್ಭುತ. ನೀನು ಮುಖ ಕಿವುಚಿಕೊಂಡು ಸಂಕಟ ಪಡುತ್ತ ಇದ್ದ ದೃಶ್ಯವಂತೂ ತುಂಬಾ ಸಹಜವಾಗಿತ್ತು.
**ನವನಟ:** ನನ್ನ ಆ ಸಹಜ ಅಭಿನಯಕ್ಕೆ ಕಾರಣ ತಿಳಿದರೆ ನಿಮ್ಮ ಈ ಮಾತನ್ನು ವಾಪಸ್ ತೆಗೆದುಕೊಳ್ಳುತ್ತೀರಿ ಸರ್.

**ಗುಂಡ:** ಆ ಬಂಗಾರಿ ತಗೊಂಡಿರೋ ಸೀರೇನೇ ಬೇಕು ಅಂತ ಹಟ ಮಾಡ್ತಾ ಇದೀಯಲ್ಲ. ಯಾಕೆ?
**ಹೆಂಡತಿ:** ಅವಳ ಗಂಡನಂತಹ ಪತಿಯನ್ನು ಪಡೆಯುವ ಪುಣ್ಯವನ್ನಂತೂ ನಾನು ಪಡೆಯಲಿಲ್ಲ. ಅದಕ್ಕೆ ಸೀರೇನಾದ್ರೂ ತಗೊಳ್ಳೋಣ ಅಂತ.

**ನಿರ್ದೇಶಕ:** ಹೌದಾ? ಏನದು?
**ನವನಟ:** ನಾನು ಹಾಕಿದ್ದ ಶ್ಯೂಗೆ ಎರಡು ಮೊಳೆಗಳು ಚುಚ್ಚಿದ್ದವು. ಅವು ಕಾಲಿಗೆ ನೋವು ಕೊಡುತ್ತಿದ್ದರಿಂದ ಸಹಜ ಅಭಿನಯ ಮೂಡಿಬಂತು.

***

**ವಕೀಲ:** ಯಾರು ಏನೇ ಹೇಳಲಿ. ಅದನ್ನು ಕೇವಲ ಅರ್ಧದಷ್ಟು ಮಾತ್ರ ನಂಬುತ್ತೀನಿ. ಯಾಕೆಂದರೆ ನಾನು ವಕೀಲ.
**ಅಧಿಕಾರಿ:** ನಾನು ಜನ ಹೇಳುವುದರ ಎರಡರಷ್ಟು ನಂಬುತ್ತೇನೆ. ಯಾಕೆಂದರೆ ನಾನು ತೆರಿಗೆ ಅಧಿಕಾರಿ.

***




**ಗೆಳೆಯ:** ಗುಂಡ, ಇವತ್ತು ಹುಟ್ಟಿದ ಹಬ್ಬ ಆಚರಿಸಿಕೊಳ್ಳುತ್ತಿರುವ ಆ ನಟಿಯ ವಯಸ್ಸು ಎಷ್ಟು?
**ಗುಂಡ:** 20 ಮುಗಿದು 19 ಪ್ರಾರಂಭವಾಗಿದೆಯಂತೆ.

***

**ರಾಯರು:** ಏನೋ ಗುಂಡ ನಿನ್ನ ಬಳಿ ಇರುವ ಬೆಕ್ಕು, ತನ್ನ ಹೆಸರು ಹೇಳುತ್ತದೆಯಂತೆ. ಹೌದಾ?
**ಗುಂಡ:** ಹೌದು ಸಾರ್.
**ರಾಯರು:** ಏನು ಅದರ ಹೆಸರು?
**ಗುಂಡ:** ಮಿಯಾಂವ್.

***

**ಟೀಚರ್:** ಬೆಕ್ಕು, ಕೋಳಿ, ಇಲಿ ಮತ್ತು ಸಿಂಹದ ಚಿತ್ರ ಬರೆದುಕೊಂಡು ಬರಲು ಹೇಳಿದ್ದೆ. ಆದರೆ ನೀನು ಕೇವಲ ಬೆಕ್ಕಿನ ಚಿತ್ರ ಬರೆದುಕೊಂಡು ಬಂದಿದ್ದೀಯಲ್ಲ. ಬಾಕಿ ಚಿತ್ರಗಳನ್ನು ಯಾಕೆ ಬರೆದುಕೊಂಡು ಬಂದಿಲ್ಲ?
**ಗುಂಡ:** ಬೆಕ್ಕು, ಇಲಿ ಹಾಗೂ ಕೋಳಿಯನ್ನೂ ಸಿಂಹ ತಿಂದುಬಿಟ್ಟಿದೆ. ಬಾಕಿ ಉಳಿದ ಬೆಕ್ಕನ್ನೂ ತಿಂದುಬಿಡುತ್ತದೆ ಅನ್ನೋ ಭಯದಿಂದ ಸಿಂಹದ ಚಿತ್ರ ಬರೆದುಕೊಂಡು ಬಂದಿಲ್ಲ ಟೀಚರ್.

ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು